# ಕೈ-ಲಾಸಂ ಜೊತೆ ಕಾಲ್-ಕರೆದು ಮಾತು

‘ಕನ್ನಡಕ್ಕೊಬ್ಬರೇ ಕೈಲಾಸಂ’ ಎನ್ನುವುದು ಟಿ.ಪಿ. ಕೈಲಾಸಂ ಕುರಿತ ಪ್ರಸಿದ್ಧ ಮಾತು. ಕೈಲಾಸಂರಂತೆ ಕನ್ನಡವನ್ನು ಬಾಗಿ ಬಳುಕಿಸಿ ಹೊಳಪು ಕೊಟ್ಟವರು, ಪದಗಳನ್ನು ಟಿಲ್ಟು ಮಾಡಿ ಹೊಸ ಅರ್ಥಗಳನ್ನು ಹೊಮ್ಮಿಸಿದವರು ಕಡಿಮೆ. ಜುಲೈ 29 ಕೈಲಾಸಂ ಹುಟ್ಟುಹಬ್ಬ. ಹುಟ್ಟುಹಬ್ಬಕ್ಕೆ ಶುಭ ಕೋರುವ ನೆಪದಲ್ಲಿ, ‘ಸುಧಾ’ ಲೇಖಕರ ಬಳಗದ ಹಿರಿಯ ಸದಸ್ಯರಾದ ನಾರಾಯಣ ರಾಯಚೂರ್ ಪ್ರಹಸನ ಪಿತಾಮಹನನ್ನು ‘ಕಾಲ್–ಕರೆದು’ ಮಾತಿಗೆಳೆದಿದ್ದಾರೆ.



ಕಲೆ: ಸಂತೋಷ್ ಸಸಿಹಿತ್ಲು

ಪ್ರಹಸನ ಪ್ರಪಿತಾಮಹ ಕೈಲಾಸಂ ಕನ್ನಡಿಗರ ಮನೆ–ಮನಗಳಲ್ಲಿ ಚಿರಸ್ಥಾಯಿ. ಅವರ ನಾಟಕ, ಹಾಡು, ಮಾತು ನೆನಪಿಸಿಕೊಳ್ಳದ ದಿನಾನೇ ಅಪರೂಪ! ಹೀಗಾಗಿ, ಈಚ್ ಡೇ ಐಸ್ ಅ ಕೈಲಾಸಂ ಡೇ! ಇನ್ನು ಬರ್ತ್‌ಡೇ ಸಂದರ್ಭದಲ್ಲಿ ಅವರನ್ನು (ಜುಲೈ 29, 1884) ಅವರನ್ನ ಮರೆಯೋದುಂಟೆ?!

ಬನ್ನಿ ಕೈಲಾಸವಾಸಿ ಕೈಲಾಸಂ ಅವರ ಜೊತೆ ಫೋನ್–ಇನ್ (ಕಾಲ್ಪನಿಕ ಸಂದರ್ಶನ) ಕಾರ್ಯಕ್ರಮ ಯಾಕೆ ಮಾಡಬಾರದು? ಬನ್ನಿ, ಕಾಲ್–ಕರೆದು ಮಾತಿಗೆ ಎಳೆಯೋಣ!

ಲೋಕಲ್ ಧ್ವನಿ: ಮೆನಿ, ಮೆನಿ, ಹ್ಯಾಪಿ ರಿಟರ್ನ್ಸ್ ಆಫ್ ದಿ ಡೇ ಕೈಲಾಸಂ ಸರ್... ಸುಧಾ ಪತ್ರಿಕಾ ಬಳಗದಿಂದ ತಮಗೆ ಜನುಮದಿನದ ಶುಭಾಶಯಗಳು. ಹೇಗಿದ್ದೀರಿ ಸಾರ್?

ಪರಲೋಕಲ್ ಧ್ವನಿ: ತುಂಬಾ ಥ್ಯಾಂಕ್ಸ್. ನೂರ್ ಮೂವತ್ತೆಂಟನೇ ಹುಟ್ಟುಹಬ್ಬಾನೂ ಮರೀದೆ ಆಚರಿಸ್ತಿದೀರಲ್ಲ! ಕನ್ನಡ ಕುಲ ಕೋಟಿಗೆ ಋಣಿ! ಸುಧಾ–ಪ್ರಜಾವಾಣಿ ಬಳಗ ನನಗೆ ಆತ್ಮೀಯವೆ; ವೈಯೆನ್ಕೆ, ಬಿ.ಎಸ್. ರಾಮರಾವ್, ಸುಧಾ ಮೊದಲರಾದ ಸಂಪಾದಕ ಸೇತೂರಾಂ ಒಬ್ಬರೇ ಇಬ್ಬರೇ... ಅನೇಕರು! ಪ್ರತಿಭೆಗಳ ಕಣಜ ಸುಧಾ–ಪ್ರಜಾವಾಣಿ!

ಲೋ. ಧ್ವನಿ: ಮೆನಿ ರಿಟರ್ನ್ಸ್; ಇದರ ಜೊತೆಗೆ, ನೀವು ಭೂ–ಲೋಕಕ್ಕೆ ರಿಟರ್ನ್ ಆಗಬೇಕು ಅಂತಾ ಈಗ, ಇಲ್ಲಿ ಬಹಳ ಒತ್ತಾಸೆ. ಆಗ ನಿಮ್ಮ ನಾಟಕಗಳ ಸಂಭಾಷಣೆ ಕನ್ನಡ–ಆಂಗ್ಲ ಅಂತ ಮೂಗು ಮುರಿದೋರು ಈಗ ಹುಟ್ಟಿದ ಮಕ್ಕಳಿಗೇ ಇಂಗ್ಲಿಷ್ ಶುರು ಹಚ್ಚಿಕೊಂಡಿದಾರೆ. ಅಂಕಗಳ ಹಿಂದೆ ಓಡೋದು ಬಿಟ್ಟು ಸಮಾಜಮುಖಿ ಆಗಿ ಅಂತ ‘ಟೊಳ್ಳು–ಗಟ್ಟಿ’ ನಾಟಕದಲ್ಲಿ ಹೇಳಿದ್ದನ್ನ